International Journal of Academic Research
ISSN: 2348-7666; Vol.6, Issue-1, January, 2019
Impact Factor: 6.023; Email: drtvramana@yahoo.co.in

# ಮಹಾನ್ ತತ್ವಶಾಸ್ತ್ರಜ್ಞ, ಅರಿಸ್ಟಾಟಲ್

**ಸರಸ್ವತಿ.ಕೆ**
**ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು,**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ**
**ಬೆಂಗಳೂರು 560060.**
**E mail id-** saraswathi.basavaraju@yahoo.com
**Mob:** 9972192645.

**ಪೀಠಿಕೆ:** ತತ್ವಜ್ಞಾನಿ ತ್ರಯರೆನಿಸಿರುವ ಸಾಕ್ರೆಟಿಸ್, ಪ್ಲೇಟೋ ಮತ್ತು ಅರಿಸ್ಟಾಟಲ್ ಗುರುವನ್ನು ಮೀರಿಸುವ ಶಿಷ್ಯರಾಗಿ ಪ್ರಪಂಚದಲ್ಲಿಯೇ ಪ್ರಖ್ಯಾತ ವ್ಯಕ್ತಿಗಳೆನಿಸಿದ್ದಾರೆ. ಅದರಲ್ಲಿಯೂ ಅರಿಸ್ಟಾಟಲ್ ಬರೆದಿರುವ ಬೃಹತ್ ಗ್ರಂಥ ಪಾಲಿಟಿಕ್ಸ ಅನೇಕ ಸವಾಲುಗಳಿಗೆ ಕಾರಣ ಹಾಗೂ ಪರಿಹಾರಗಳನ್ನು ಸೂಚಿಸಿರುವ ಕೃತಿಯಾಗಿದೆ ಹಾಗೂ ರಾಜಕೀಯ ಚಿಂತನೆಗೆ ಅಪೂರ್ವ ಕೊಡುಗೆಯಾಗಿದೆ. ಆದುದರಿಂದಲೇ ಪ್ರೊ. ಸೆಲ್ಲರ್ "ಪ್ರಾಚೀನ ಕಾಲದಿಂದ ನಮಗೆ ದೊರೆತಿರುವ ಮಹತ್ವದ ಕೃತಿ ಪಾಲಿಟಿಕ್ಸ" ಎಂದು ಹೇಳಿರುವುದು ಅವರ ಚಿಂತನೆಯ ಕುರಿತು ಈ ಲೇಖನದಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಶತಮಾನದ ಪ್ರಾಚೀನ ಗ್ರೀಕಿನ ಮಹಾನ್ ತತ್ವಶಾಸ್ತ್ರಜ್ಞ, ಪಾಶ್ಚಿಮಾತ್ಯ ಇತಿಹಾಸದ ಮಹಾನ್ ವ್ಯಕ್ತಿಗಳಲ್ಲಿ ಶ್ರೇಷ್ಠ ಮೇಧಾವಿ, ರಾಜಕೀಯ ಚಿಂತಕ – ರಾಜ್ಯಶಾಸ್ತ್ರದ ಪಿತಾಮಹ, ಭೌತಶಾಸ್ತ್ರ, ರಸಾಯನಶಾಸ್ತ್ರ, ನೀತಿಶಾಸ್ತ್ರ, ಮನೋವಿಜ್ಞಾನ, ತರ್ಕಶಾಸ್ತ್ರದ ಜೀವಶಾಸ್ತ್ರದ ಪಿತಾಮಹ. ಎಂದು ಪ್ರಪಂಚದಲ್ಲಿಯೇ ಪ್ರಖ್ಯಾತವಾಗಿರುವ ಪ್ಲೇಟೋನ ಶಿಷ್ಯ, ದಿ ಗ್ರೇಟ್ ಅಲೆಗ್ಸಾಂಡರ್‌ನ ಗುರುವಾಗಿದ್ದಂತಹ ನಡೆದಾಡುವ ವಿಶ್ವಕೋಶ ಎನಿಸಿರುವ, ಮನುಷ್ಯ ಸ್ವಾಭಾವಿಕವಾಗಿ ಸಂಘಜೀವಿ, ಸಮಾಜಜೀವಿ, ರಾಜಕೀಯ ಜೀವಿ ಜಗಳಗಂಟಿ ಸ್ವಭಾವವನ್ನು ಹೊಂದಿದ್ದಾನೆ ಎಂದು ಜಗತ್ತಿಗೆ ಸಾರಿದ ವ್ಯಕ್ತಿ ಅರಿಸ್ಟಾಟಲ್. ಜಗತ್ತಿನಲ್ಲಿಯೇ ಪ್ರಸಿದ್ಧವಾದ ಅಧ್ಯಯನ ಕೇಂದ್ರಗಳಲ್ಲೊಂದಾದ "ಲೈಸಿಯಂ" ವಿಶ್ವವಿದ್ಯಾಲಯದ ಸ್ಥಾಪಕ, ಸುಖಕರ/ಸಂತೋಷಕರ ಜೀವನ ಮಾನವ ಜೀವನದ ಎಲ್ಲ ಚಟುವಟಿಕೆಗಳ ಪ್ರಮುಖ ಉದ್ದೇಶವಾಗಿದೆ, ರಾಜ್ಯದ ಪ್ರಮುಖ ಉದ್ದೇಶವೇ ಮಾನವನ ನೆಮ್ಮದಿಯುತವಾದ, ಶಾಂತಿಯುತವಾದ ಸುಖಕರ ಜೀವನವೆಂಬುದನ್ನು ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿರುವ ಮಹಾನ್ ಚಿಂತಕ. ಇಂದು ನಾನಾ ಕಾರಣಗಳಿಗಾಗಿ ಮನುಷ್ಯ ಸದಾ ದು:ಖಿಯಾಗಿರುತ್ತಾನೆ. ಅಧಿಕಾರಕ್ಕಾಗಿ, ಹಣಕ್ಕಾಗಿ ನಡೆಯುತ್ತಿರುವ ಹೋರಾಟಗಳಲ್ಲಿ, ಸ್ಪರ್ಧೆಗಳಲ್ಲಿ ಗ್ರಾಮಗಳಿಂದ ಹಿಡಿದು, ತಾಲ್ಲೋಕು, ಜಿಲ್ಲೆ, ರಾಜ್ಯ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದವರೆಗೆ ಸಂಘರ್ಷ ಅವ್ಯಾಹತವಾಗಿ ತಲೆದೋರುತ್ತಿದೆ. ಇಂತಹ ಸಂದರ್ಭದಲ್ಲಿ, ಸಂತೋಷಕರ ಜೀವನದ ಬಗೆಗೆ ಪ್ರಾಚೀನ ಕಾಲದಲ್ಲಿಯೇ ಅದರ ಬಗ್ಗೆ ಚಿಂತನೆ ಪ್ರಸ್ತುತ ಪ್ರಪಂಚದಲ್ಲಿ ಚರ್ಚೆಗೆ ಒಳಪಟ್ಟಿದೆ. ರಾಜ್ಯ, ಸಮುದಾಯ, ಗುಲಾಮಗಿರಿತನ, ಯಜಮಾನ, ಸಂಪತ್ತು, ನಾಗರಿಕತ್ವ, ವಿವಿಧ ಬಗೆಯ ಸಂವಿಧಾನಗಳನ್ನು ಅಧ್ಯಯನ ಮಾಡಿ ಉತ್ತಮ ಸರ್ಕಾರಗಳು, ಮತ್ತು ಕೆಟ್ಟ ಸರ್ಕಾರಗಳ ಬಗೆಗೆ, ಕ್ರಾಂತಿಗೆ ಕಾರಣಗಳು ಯಾವುವು ಅವುಗಳನ್ನು ತಡೆಗಟ್ಟುವ ಬಗೆಗೆ ಸಂಪೂರ್ಣವಾದ ವಿವರಣೆಯನ್ನು ನೀಡಿದ್ದಾರೆ. ಅದರಲ್ಲಿಯೂ ಇಂದು ಮನುಷ್ಯ ಪ್ರತಿಯೊಂದು ವಿಷಯಕ್ಕೂ ದು:ಖ ಪಡುತ್ತಿದ್ದಾನೆ ಸಣ್ಣ ಸಣ್ಣ ವಿಚಾರಕ್ಕೂ ಚಿಂತೆ ಮಾಡಿ ತನ್ನ ಸಂತೋಷವನ್ನು ಕಳೆದುಕೊಂಡು ದು:ಖಿತನಾಗಿದ್ದಾನೆ. ಪ್ರಪಂಚದಲ್ಲಿ ಅತ್ಯಂತ ಸಂತೋಷವಾಗಿರುವ ರಾಷ್ಟ್ರಗಳಲ್ಲಿ ಫಿನ್ ಲ್ಯಾಂಡ್ ಮೊದಲ ಸ್ಥಾನದಲ್ಲಿದೆ. ನಂತರದಲ್ಲಿ ಡೆನ್ಮಾರ್ಕ್ ಐರ್ಲೆಂಡ್, ಸ್ವೀಡನ್, ಇಸ್ರೇಲ್, ನೆದರ್‌ಲ್ಯಾಂಡ್, ನಾರ್ವೆ, ಲಕ್ಸಂಬರ್ಗ್, ಸ್ವಿಟ್ಜರ್ಲೆಂಡ್, ಆಸ್ಟ್ರೇಲಿಯ, ನ್ಯೂಝಿಲ್ಯಾಂಡ್, ಕೋಸ್ಟರಿಕ, ಕುವೈತ್, ಆಸ್ಟ್ರಿಯಾ, ಕೆನಡ, ಬೆಲ್ಜಿಯಂ, ಐರ್ಲೆಂಡ್,ಯುನೈಟೆಡ್ ಕಿಂಗ್‌ಡಮ್, (ಫೋರ್ಬ್ಸ ಇಂಡಿಯಾ ವೆಬ್ ಸೈಟ್, ) ಆದರೆ ಭಾರತ ೧೨೬ ನೆಯ ಸ್ಥಾನದಲ್ಲಿದ್ದು ತನ್ನ ನೆರೆಯ ರಾಷ್ಟ್ರಗಳಾದ ನೇಪಾಳ, ಬಾಂಗ್ಲಾ, ಚೀನಾ ದೇಶಗಳಿಗಿಂತಲೂ ಹೆಚ್ಚು ದು:ಖಿತ ರಾಷ್ಟ್ರ ಎನಿಸಿದೆ. ಮುಖ್ಯವಾಗಿ

ಸಂತೋಷವೇ ಮಾನವ ಜೀವನದ ಎಲ್ಲ ಚಟುವಟಿಕೆಗಳ ಪ್ರಮುಖ ಉದ್ದೇಶವಾಗಿದೆ. ಸುಖಕರವೂ ನೆಮ್ಮದಿಯುತವೂ ಆದ ಜೀವನವೇ ರಾಜ್ಯದ ಗುರಿಯಾಗಿದೆ ಅದಕ್ಕಾಗಿಯೇ ರಾಜ್ಯ ಅಸ್ಥಿತ್ವಕ್ಕೆ ಬಂದಿದೆ ಎಂದು ಹೇಳಿರುವ ಅರಿಸ್ಟಾಟಲ್‌ನ ಚಿಂತನೆಯು ಪ್ರಸ್ತುತ ಸಮಕಾಲೀನ ಪ್ರಪಂಚಕ್ಕೆ ಅನ್ವಯವಾಗುತ್ತದೆ.

ಕ್ರಿಸ್ತಪೂರ್ವ ೩೮೪ರಲ್ಲಿ ಗ್ರೀಕಿನ ಮೆಸಿಡೋನಿಯಾದ ಸ್ಟಗಿರಾ ಎಂಬಲ್ಲಿ ಜನಿಸಿದ ಅರಿಸ್ಟಾಟಲ್ ತಂದೆ ನಿಕೊಮಕಸ್ ಅವರ ಮರಣಾ ನಂತರ ಕ್ರಿ.ಪೂ. ೩೬೭ರಲ್ಲಿ ಅಥೆನ್ಸಗೆ ವಲಸೆ ಬಂದು ಪ್ಲೇಟೋನ ಅಕಾಡೆಮಿ ಯಲ್ಲಿ ೨೦ ವರ್ಷಗಳ ಕಾಲ ಅಧ್ಯಯನದಲ್ಲಿ ತೊಡಗಿ ಅನೇಕ ಜಗತ್ಪ್ರಸಿದ್ಧ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪಾಲಿಟಿಕ್ಸ್, ಪೊಯೆಟಿಕ್ಸ, ಆನ್ ಮೊನಾರ್ಕಿ, ನಿಕೋಮಾಚಿಯನ್ ಎಥಿಕ್ಸ, ತಹ ರೆಟಾರಿಕ್, ಪಿಸಿಕ್ಸ್, ಮೆಟಾಫಿಸಿಕಾ, ಡಿ ಅನಿಮ, ಇತ್ಯಾದಿ ಗ್ರಂಥಗಳು ಅರಿಸ್ಟಾಟಲ್ ರಚಿಸಿರುವ ಪ್ರಸಿದ್ಧವಾದ ಕೃತಿಗಳಾಗಿವೆ., ಮೊಟ್ಟಮೊದಲ ಬಾರಿಗೆ ರಾಜ್ಯಶಾಸ್ತ್ರವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿ ಪಾಲಿಟಿಕ್ಸ್ ಎಂಬ ಬೃಹತ್ ಕೃತಿಯನ್ನು ರಚಿಸಿ, ರಾಜ್ಯಶಾಸ್ತ್ರದ ಪಿತಾಮಹ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಅರಿಸ್ಟಾಟಲ್ ತಿಳಿಸಿರುವ ಅನೇಕ ಅಂಶಗಳು ಪ್ರಸ್ತುತ ಸಮಾಜದಲ್ಲಿ ಕಾಣಬಹುದಾಗಿದೆ

ಅರಿಸ್ಟಾಟಲ್ ತಿಳಿಸಿರುವಂತೆ ಮನುಷ್ಯ ಸ್ವಾಭಾವಿಕವಾಗಿ ಸಂಘಜೀವಿ, ಸಮಾಜಜೀವಿ, ರಾಜಕೀಯ ಜೀವಿ ಹಾಗಾಗಿ ಮನುಷ್ಯ ಇತರರೊಂದಿಗೆ ಸಮಾಜದಲ್ಲಿ ಗುಂಪಿನಲ್ಲಿ ಒಟ್ಟಾಗಿ ಬದುಕಲು ಇಚ್ಚಿಸುತ್ತಾನೆ. ರಾಜ್ಯ ಕುಟುಂಬ ಮತ್ತು ಗ್ರಾಮಗಳ ಸಮುದಾಯವೇ ಆಗಿದೆ. ಮನುಷ್ಯರ ದೈನಂದಿನ ಬಯಕೆಗಳ ಪೂರೈಕೆಗಾಗಿ ನೈಸರ್ಗಿಕವಾಗಿ ಸ್ಥಾಪಿತವಾಗಿದೆ ಪ್ರತಿಯೊಂದು ಕಟುಂಬದ ಹಿರಿಯರು ಅದರ ಮೇಲ್ವಿಚಾರಣೆಯನ್ನು ಮಾಡುತ್ತಾರೆ. ಆಗ ರೂಪುಗೊಂಡ ಮೊದಲ ಸಮಾಜ ಗ್ರಾಮ. ಹಲವಾರು ಗ್ರಾಮಗಳು ಒಂದುಗೂಡಿದಾಗ ಸಾಕಷ್ಟು ಸ್ವಾವಲಂಬಿಯಾಗಲು ರಾಜ್ಯವು ಅಸ್ಥಿತ್ವಕ್ಕೆ ಬರುತ್ತದೆ. ಅಲ್ಲದೆ ರಾಜ್ಯವು ಮನುಷ್ಯರ ಜೀವನದ ಅಗತ್ಯಗಳಿಗೆ ಹುಟ್ಟಿಕೊಂಡಿದೆ ಮತ್ತು ಉತ್ತಮ ಜೀವನದ ಸಲುವಾಗಿ ಮುಂದುವರಿಯುತ್ತಿದೆ.

ಮಾನವ ಜೀವಿಯು ರಾಜ್ಯದ ಮೂಲಕ ಮಾತ್ರ ತನ್ನ ಅಗತ್ಯಗಳನ್ನು ಈಡೇರಿಸಿಕೊಳ್ಳಲು ಸಾಧ್ಯ,. ಮನುಷ್ಯ ಸ್ವಾಭಾವಿಕವಾಗಿ ರಾಜಕೀಯ ಪ್ರಾಣಿಯಾಗಿದ್ದಾನೆ ಜೊತೆಗೆ ಜಗಳಗಂಟಿ ಸ್ವಭಾವವನ್ನು ಹೊಂದಿದ್ದಾನೆ. ಹಾಗಾಗಿ, ಜಗಳಗಳು, ಘರ್ಷಣೆಗಳು ಸರ್ವೇ ಸಾಮಾನ್ಯವಾಗಿರುತ್ತವೆ. ಮನುಷ್ಯನನ್ನು ನಿಯಂತ್ರಿಸುವುದು ಅತ್ಯಾವಶ್ಯಕ. ಮನುಷ್ಯನ ಬಾಹ್ಯ ಚಟುವಟಿಕೆಗಳನ್ನು ನಿಯಂತ್ರಿಸಲು ಇರುವ ನಿಯಮಗಳೇ ಕಾನೂನು. ಆ ಕಾನೂನುಗಳನ್ನು ರೂಪಿಸಲು ಅಧಿಕಾರ ಹೊಂದಿರುವ ಸಂಸ್ಥೆಯೇ ರಾಜ್ಯ. ರಾಜ್ಯದ ಉದ್ದೇಶವನ್ನು ಈಡೇರಿಸುವ ಸಂಸ್ಥೆಯೇ ಸರ್ಕಾರ. ರಾಜ್ಯವಿಲ್ಲದೆ ಇದ್ದರೆ ಮನುಷ್ಯ ಕೆಟ್ಟ ಅಥವಾ ಅದಕ್ಕಿಂತ ಮೇಲ್ಮಟ್ಟವ. ಕಾನೂನಿನ ಸಂವಿಧಾನದ ಚೌಕಟ್ಟಿನಲ್ಲಿರುವುದರಿಂದ ವ್ಯವಸ್ಥೆಯ ಅಡಿಯಲ್ಲಿದ್ದಾಗ ಮನುಷ್ಯನು ಇತರ ಎಲ್ಲಾ ಪ್ರಾಣಿಗಳಿಗಿಂತ ಶ್ರೇಷ್ಠನಾಗಿರುತ್ತಾನೆ. ಕಾನೂನು ಮತ್ತು ನ್ಯಾಯದಿಂದ ಪ್ರತ್ಯೇಕವಾದಾಗ ಅವನು ಎಲ್ಲಾ ಪ್ರಾಣಿಗಳಿಗಿಂತ ಕೆಟ್ಟವನು, ಕಾನೂನು ಬಾಹಿರ, ಹೃದಯಹೀನ ಮಾನವೀಯತೆ ಇಲ್ಲದವ ಸಮಾಜದಲ್ಲಿ ಬದುಕಲು ಸಾಧ್ಯವಾಗದವನು ಸಮಾಜದ ಅಗತ್ಯವಿಲ್ಲದವನು ಪ್ರಾಣಿ ಅಥವಾ ದೇವರಾಗಿರಬೇಕು ಇಲ್ಲವೇ ದೆವ್ವವಾಗಿರಬೇಕು. ಅಷ್ಟೇ ಅಲ್ಲದೆ ಮನುಷ್ಯನನ್ನು ನಿಯಂತ್ರಿಸುವುದು ಅತ್ಯಾವಶ್ಯಕ ಇಲ್ಲದಿದ್ದರೆ ಶಾಂತಿಯುತವಾಗಿ ನೆಮ್ಮದಿಯುತವಾದ ಜೀವನವನ್ನು ನಡೆಸುವುದು ಅಸಾಧ್ಯ. ಕುಟುಂಬ ದೈಹಿಕ ಮಾನಸಿಕ ಬೆಳವಣಿಗೆಗೆ ಅವಕಾಶ ನೀಡಿದರೆ, ರಾಜ್ಯವು ಮಾನವನ ಬೌದ್ಧಿಕ ಸುಖಕರ ಜೀವನಕ್ಕೆ ಅಗತ್ಯವಾದವುಗಳನ್ನು ಪೂರೈಸುತ್ತದೆ.

ಇಂದಿಗೂ ಎಲ್ಲಾ ಹಂತಗಳಲ್ಲಿ ಕಾನೂನುಗಳು ಯಥೇಚ್ಚವಾಗಿ ಪ್ರತಿಯೊಂದು ರಾಷ್ಟ್ರವೂ ಸಹ ರೂಪಿಸಿಕೊಂಡಿದ್ದರೂ, ಪ್ರತಿಯೊಂದು ತಪ್ಪಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ ಎಂದು ತಿಳಿದಿದ್ದರೂ ಸಹ ಅನೇಕ ದುಷ್ಕೃತ್ಯಗಳನ್ನು ಮನುಷ್ಯ ರಾಜಾರೋಷವಾಗಿ ಮಾಡುತ್ತಿರುವುದು ಕಂಡುಬರುತ್ತಿದೆ. ಒಂದು ವೇಳೆ ಕನೂನುಗಳು, ಸಂವಿಧಾನ ಎಂಬ

ಚೌಕಟ್ಟು ಇಲ್ಲದೇ ಇದ್ದಿದ್ದರೆ ಮನುಷ್ಯ ಇತರ ಎಲ್ಲಾ ಪ್ರಾಣಿಗಳಿಗಿಂತ ಕಡೆಯಾಗಿರುತ್ತಿದ್ದ ಏಕೆಂದರೆ ಮನುಷ್ಯ ಹುಟ್ಟಿನಿಂದಲೇ ಸ್ವಾರ್ಥಿಯಾಗಿದ್ದಾನೆ. ಬುದ್ಧಿವಂತಿಕೆಯನ್ನು ಅವನು ಕೆಟ್ಟಗುರಿಗಳಿಗೆ ಬಳಸಬಹುದು. ಅಷ್ಟೇ ಅಲ್ಲದೆ ಅವನು ಸದ್ಗುಣವನ್ನು ಹೊಂದಿಲ್ಲದಿದ್ದರೆ, ಅವನು ಅತ್ಯಂತ ಅಪವಿತ್ರ ಮತ್ತು ಅತ್ಯಂತ ಘೋರ ಪ್ರಾಣಿ ಎಂಬುದರಲ್ಲಿ ಸಂಶಯವಿಲ್ಲ.

ಇದರ ನಿರ್ವಹಣೆಯು ಒಂದು ಕಲೆಯಾಗಿದೆ. ಸಂಪತ್ತನ್ನು ಪಡೆಯುವ ಕಲೆ ಮನೆಯ ನಿರ್ವಹಣೆಗೆ ಹೋಲುತ್ತದೆ ಆಸ್ತಿ ಮನೆಯ ಒಂದು ಭಾಗ ಅದನ್ನು ಪಡೆಯುವುದು ಮನೆಯ ನಿರ್ವಹಣೆಯಂತೆ ಒಂದು ಕಲೆ ಆಗಿದೆ. ಏಕೆಂದರೆ ಯಾವುದೇ ಮನುಷ್ಯ ಸುಖಕರವಾದ ಜೀವನಕ್ಕೆ ಅಗತ್ಯವಾದಷ್ಟು ಆಸ್ತಿಯನ್ನು ಹೊಂದಬಹುದು ಅದಕ್ಕೆ ರಾಜ್ಯ ಮಾನ್ಯ ಮಾಡಿಕೊಡಬೇಕು. ಆಸ್ತಿ ಖಾಸಗಿಯಾಗಿರಬೇಕು ಎಂಬುದು ಉತ್ತಮ ಆದರೆ ಅದರ ಬಳಕೆ ವ್ಯವಹಾರವೆಂದರೆ ಮನುಷ್ಯರಲ್ಲಿ ಪರೋಪಕಾರಿ ಮನೋಭಾವವನ್ನು ಸೃಷ್ಟಿಸುವುದು. ಆಸ್ತಿ ತನ್ನದೆಂದು ಭಾವಿಸಿದಾಗ ಆನಂದವು ಅಗಾಧವಾಗಿರುತ್ತದೆ ಎಲ್ಲರೂ ಬಹುತೇಕ ಹಣವನ್ನು ಮತ್ತು ಇತರ ವಸ್ತುಗಳನ್ನು ಒಂದು ಹಂತಕ್ಕೆ ಪ್ರೀತಿಸುತ್ತಾರೆ. ಇದಲ್ಲದೆ ಸ್ನೇಹಿತರು, ಅಥವಾ ಅತಿಥಿಗಳು ಅಥವಾ ಸಹಚರರಿಗೆ ಸಹಾಯ ಅಥವಾ ಒಳ್ಳೆಯದನ್ನು ಮಾಡುವುದರಲ್ಲಿ ಇನ್ನು ಹೆಚ್ಚಿನ ಸಂತೋಷವಿದೆ ಅದನ್ನು ಮನುಷ್ಯನು ಖಾಸಗಿ ಆಸ್ತಿ ಹೊಂದಿರುವಾಗ ಮಾತ್ರ ಮಾಡಬಹುದು. ಭವಿಷ್ಯತ್ತಿನ ಶ್ರಮಜೀವನಕ್ಕೆ ಸ್ಫೂರ್ತಿಯನ್ನು ಆಸ್ತಿ ನೀಡುತ್ತದೆ. ಅದಕ್ಕೆ ವಿರುದ್ಧವಾಗಿ ರಾಜ್ಯ ನಡೆದುಕೊಂಡರೆ ಅದು ಪ್ರಕೃತಿಗೆ ವಿರುದ್ಧವಾಗುತ್ತದೆ. ಅವನಿಗೆ ಅವಶ್ಯಕತೆಗಳನ್ನು ಒದಗಿಸದ ಹೊರತು ಬದುಕಲಾರನು ಸಾಧನಗಳು ಅನೇಕ ರೂಪದಲ್ಲಿವೆ. ಸಾಧನವನ್ನು ಸ್ವಾಧೀನಪಡಿಸಿಕೊಳ್ಳುವುದು ಜೀವನದ ನಿರ್ವಹಣೆಯಾಗಿದೆ.

ರಾಜ್ಯದಲ್ಲಿನ ದುಷ್ಕೃತ್ಯಗಳು ಖಾಸಗಿ ಆಸ್ತಿ ಹೊಂದಿರುವುದರಿಂದ ಉದ್ಭವವಾಗುತ್ತವೆ ಈ ದುಷ್ಕೃತ್ಯಗಳು ಮನುಷ್ಯನ ಕಪಟತನ ಸ್ವಭಾವದ ವಿಭಿನ್ನ ಕಾರಣಗಳಿಂದಾಗಿವೆ. ಆಸ್ತಿಯನ್ನು ಸಾರ್ವಜನಿಕ ಹಿತಕ್ಕಾಗಿ ಬಳಸುವಂತಿರಬೇಕು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಮಾತ್ರ ಹೊಂದಬೇಕು, ಮೋಸದ ರೀತಿಯ ಸಂಪಾದನೆ ಅನಿಯಮಿತ ಸಂಪತ್ತಿನ ಸ್ವಾಧೀನತೆ ಒಂದು ವ್ಯವಹಾರವಲ್ಲ ಎಲ್ಲಾ ಸಂಪತ್ತಿಗೆ ಮಿತಿ ಇರಬೇಕು

ಸಮಕಾಲೀನ ಪ್ರಪಂಚದಲ್ಲಿ ಮನುಷ್ಯನ ಅನೇಕ ಸಮಸ್ಯೆಗಳಿಗೆ ಹಣ ಮೂಲ ಕಾರಣಗಳಲ್ಲೊಂದಾಗಿದೆ. "ಹಣ ಕಂಡರೆ ಹೆಣ ಕೂಡ ಬಾಯಿಬಿಟ್ಟಿತಂತೆ", "ಕಾಸಿದ್ರೆ ಕಡಲೆ ಇಲ್ಲದಿದ್ದರೆ ನಡ್ಲೆ", ಎಂಬ ಗಾದೆ ಮಾತಿನಂತೆ ಹಣವನ್ನು ಗಳಿಸಲು ಅದನ್ನು ಉಳಿಸಿಕೊಳ್ಳಲು ಶ್ರೀಮಂತರಾಗಲು ಮನುಷ್ಯ, ರಾಜ್ಯ ರಾಷ್ಟ್ರಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ನಡೆಯುತ್ತಿದೆ. ಹಣಕಾಸಿನ ಅಂದರೆ ಆರ್ಥಿಕ ಸಮತೋಲನವನ್ನು ಕಾಪಾಡಿಕೊಂಡು ಹೋಗುವುದು ಒಂದು ನಿರ್ವಹಣೆಯ ಕಲೆಯಾಗಿದೆ. ಇಂದು ಬಿ.ಬಿ.ಎ ನಿರ್ವಹಣಾಶಾಸ್ತ್ರ ಒಂದು ವಾಣಿಜ್ಯಶಾಸ್ತ್ರದ ಮತ್ತೊಂದು ವಿಷಯವಾಗಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯಗಳು ಬೋಧನೆ ಮಾಡುತ್ತಿವೆ. ಇಂದು ಅದು ಅತ್ಯಂತ ಬೇಡಿಕೆಗಳಲ್ಲಿ ಒಂದಾಗಿರುವ ವಿಷಯವಾಗಿದ್ದು ಹಣಕಾಸಿನ ನಿರ್ವಹಣೆಯ ಕುರಿತು ಕಾರ್ಯಾಗಾರಗಳನ್ನು ನಡೆಸಿಕೊಡಲು ಅನೇಕ ತರಬೇತಿ ಕೇಂದ್ರಗಳು ನಾಯಿಕೊಡೆಗಳಂತೆ ತಲೆಎತ್ತಿವೆ. ಅದರ ಬಗ್ಗೆ ಅರಿಸ್ಟಾಟಲ್ ರವರು ಕ್ರಿಸ್ತಪೂರ್ವದಲ್ಲಿಯೇ ವಿವರವಾಗಿ  ವಿಶ್ಲೇಷಿಸಿರುವುದು ಅವರ ಬುದ್ಧಿವಂತಿಕೆಯನ್ನು ಎತ್ತಿ ತೋರಿಸುತ್ತಿದೆ.

ಪ್ರಕೃತಿ ಎಲ್ಲರಿಗೂ ಬದುಕಲು ಬೇಕಾದಷ್ಟನ್ನು ಅನುವು ಮಾಡಿಕೊಟ್ಟಿದೆ. ಆದರೆ ದುರಾಸೆಗಲ್ಲ. ಕೆಲವು  ಪ್ರಾಣಿ ಪಕ್ಷಿಗಳು ತಮ್ಮ ಸಂತತಿಗೆ ನಿರ್ದಿಷ್ಠ ಸಮಯದವರೆಗೆ (ಹಾಲು)ಆಹಾರವನ್ನು ಒದಗಿಸುತ್ತವೆ. ಯಾವುದೇ ಪ್ರಾಣಿಗಳು ತಮಗೆ ಬೇಕಾದಷ್ಟನ್ನು ಮಾತ್ರ ಹೊಂದಿಸಿಕೊಳ್ಳಲು ಪ್ರಯತ್ನಿಸುತ್ತವೆ. ಆದರೆ ಮನುಷ್ಯನ ದುರಾಸೆಗೆ ಮಿತಿ ಇಲ್ಲದಂತಾಗಿದ್ದು ಅನೇಕ ರೀತಿಯ ಭ್ರಷ್ಟಾಚಾರಗಳಿಗೆ ದುರಾಸೆಯೇ ಕಾರಣವಾಗಿದೆ.

ಕ್ರಾಂತಿಗೆ ಅನೇಕ ಕಾರಣಗಳುಂಟು. ಅದರಲ್ಲಿ ಮುಖ್ಯವಾಗಿ ಅಸಮಾನತೆ ಕ್ರಾಂತಿಗೆ ಕಾರಣವಾಗುತ್ತದೆ ಸರ್ಕಾರಗಳ ಬದಲಾವಣೆ, ಸ್ವಾರ್ಥಕ್ಕೆ ಅಧಿಕಾರ ದುರುಪಯೋಗ ಪಡಿಸಿಕೊಂಡಾಗ, ವರ್ಗಗಳ ನಡುವೆ ಅಂತರ ಹೆಚ್ಚಿದಾಗ ಹೀಗೆ ನಾನಾ ಕಾರಣಗಳಿಗಾಗಿ ರಾಜ್ಯದಲ್ಲಿ ಕ್ರಾಂತಿ ಸಂಭವಿಸುತ್ತದೆ. ಸರ್ಕಾರ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಾಗ ಜನರು ಕ್ರಾಂತಿಗೆ ತೊಡಗುತ್ತಾರೆ, ಅಲ್ಲದೆ ಒಂದು ವರ್ಗವನ್ನು ಅಧಿಕಾರದಿಂದ ದೀರ್ಘ ಕಾಲದವರೆಗೆ ದೂರವಿಟ್ಟಾಗಲೂ ಕ್ರಾಂತಿ ಸಂಭವಿಸುತ್ತದೆ. ಅಧಿಕಾರದಲ್ಲಿರುವವರು ಜನರ ಸಮಸ್ಯೆಗಳಿಗೆ ಸ್ಪಂದಿಸದೆ ತಮ್ಮ ಸ್ವಾರ್ಥಕ್ಕಾಗಿ ಇಲ್ಲವೇ ತಮ್ಮವರ ಹಿತಕ್ಕಾಗಿ ಸರ್ಕಾರ ನಡೆಸಿದರೆ, ಅರ್ಹತೆಯಿರುವವರನ್ನು ಅಧಿಕಾರದಿಂದ ದೂರವಿರಿಸಿದರೆ, ಜನರ ಆಶಯಗಳಿಗೆ ವಿರುದ್ಧವಾಗಿ ಸರ್ಕಾರ ಕಾನೂನನ್ನು ಹೊರಡಿಸಿದರೆ, ಸಂಪತ್ತು ಕೆಲವೇ ಜನರಲ್ಲಿ ಕೇಂದ್ರೀಕರಣವಾಗಿದ್ದರೆ, ಭ್ರಷ್ಟಾಚಾರ ನಡೆಯುತ್ತಿದ್ದರೆ, ಚುನಾವಣೆಗಳು ನ್ಯಾಯಯುತವಾಗಿ ನಡೆಯದಿದ್ದರೆ, ಸರ್ಕಾರಗಳ ಬದಲಾವಣೆಗೆ ಜನರು ಹಿಂಸಾಚಾರ ಇಲ್ಲವೇ ಶಾಂತಿಯುತವಾಗಿ ಕ್ರಾಂತಿಗೆ ಮುಂದಾಗಬಹುದು ಸರ್ಕಾರ ಜನರಲ್ಲಿ ಭೀತಿಯನ್ನು ಹುಟ್ಟಿಸುವಂತಿದ್ದರೆ, ಹೆಚ್ಚಿನ ಜನಸಂಖ್ಯೆಯಲ್ಲಿರುವವರಿಗೆ ಅಧಿಕಾರ ದೊರೆಯದಿದ್ದಾಗ, ಬೇರೆ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದಾಗಲೂ, ವಿದೇಶೀಯರಿಗೆ ಸರ್ಕಾರಿ ಅಧಿಕಾರ ದೊರೆತರೆ, ಅರ್ಹತೆ ಇಲ್ಲದವರು ಅಧಿಕಾರಕ್ಕೆ ಬಂದರೆ ಹೀಗೆ ನಾನಾ ಅಂಶಗಳು ಕ್ರಾಂತಿಗೆ ಕಾರಣವಾಗುತ್ತವೆ.

ಕ್ರಾಂತಿಯನ್ನು ತಡೆಯಬೇಕಾದರೆ ಜನರಲ್ಲಿ ಭಯದ ವಾತಾವರಣವನ್ನು ಹೋಗಲಾಡಿಸಬೇಕು, ಕಾನೂನನ್ನು ಜನರು ಗೌರವಿಸುವಂತೆ ನೋಡಿಕೊಳ್ಳಬೇಕು, ಅರ್ಹರಿಗೆ ಸ್ಥಾನಗಳು ಲಭಿಸುವಂತೆ, ಚುನಾವಣೆಗಳು ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಪರಿಮಿತ ಅಧಿಕಾರವಿರಬೇಕು, ಮಧ್ಯಮವರ್ಗದವರ ಕೈಯಲ್ಲಿ ಅಧಿಕಾರ ಇರುವಂತೆ ನೋಡಿಕೊಳ್ಳಬೇಕು.

**ಫಲಿತಾಂಶ:**

ಒಟ್ಟಾರೆ ಅರಿಸ್ಟಾಟಲ್‌ರವರು ತಮ್ಮ ಪಾಲಿಟಿಕ್ಸ್ ಕೃತಿಯಲ್ಲಿ ತಿಳಿಸಿರುವ ಅನೇಕ ಅಂಶಗಳು ಪ್ರಪಂಚದ ಪ್ರಸ್ತುತ ಸನ್ನಿವೇಶಕ್ಕೆ ಅನ್ವಯವಾಗುತ್ತಿದೆ. ಸ್ವತಃ ತಮ್ಮ ಗುರುವಾಗಿದ್ದ ಪ್ಲೇಟೋರವರ ವಿಚಾರಗಳನ್ನು ಟೀಕಿಸಿರುವ ಅರಿಸ್ಟಾಟಲ್‌ರವರ ವಿಚಾರಗಳು ವಾಸ್ತವಕ್ಕೆ ಹತ್ತಿರವಾಗಿದ್ದು ವಾಸ್ತವವಾದಿಯಾಗಿದ್ದಾರೆ. ಅವರ ಲೈಸಿಯಂ ವಿಶ್ವವಿದ್ಯಾಲಯ ಚರ್ಚಾಕೇಂದ್ರವೆನಿಸಿ ಅನೇಕ ಸಂಶೋಧಕರ, ಅನ್ವೇಷಣೆಕಾರರ, ಸಂಗ್ರಹಕರ ಚಿಂತಕರ ವಿಶ್ಲೇಷಣೆಕಾರರ ದಾಖಲೆಗೆ ದಾರಿಯಾಗಿದೆ. ಇತಿಹಾಸದ ಪ್ರಥಮ ವೈಜ್ಞಾನಿಕ ಸಂಶೋಧನಾ ವಿಶ್ಲೇಷಣೆಕಾರರಾಗಿ ಅರಿಸ್ಟಾಟಲ್‌ರವರು ಹೆಸರಾಗಿದ್ದಾರೆ. ಅವರ ಗ್ರಂಥಗಳ ಅಧ್ಯಯನ ಹಿಂದಿಗಿಂತಲೂ ಈಗ ಅತ್ಯಂತ ಅವಶ್ಯಕವೆನಿಸಿದೆ ಏಕೆಂದರೆ ಇಂದಿನ ಅನೇಕ ಸಮಸ್ಯೆಗಳಿಗೆ ಅವರ ಕೃತಿಯಲ್ಲಿ ಉತ್ತರಗಳುಂಟು ಆದುದರಿಂದಲೇ ಡಾಂಟೆ ರವರು ಅರಿಸ್ಟಾಟಲ್ ರವರ ಬಗೆಗೆ ತಿಳಿದಿರುವವರ ಪಿತಾಮಹ ಎಂದು ಹೇಳಿರುವ ಮಾತು ಅಕ್ಷರಶ: ನಿಜವಾಗಿದೆ.

**ಸವಾಲುಗಳು**

ಒತ್ತಡದ ಜೀವನವನ್ನು ನಡೆಸುವಾಗ ಪ್ರತಿಯೊಂದು ಸಣ್ಣ ಸಣ್ಣ ವಿಚಾರಕ್ಕೂ ನೋವನ್ನು ಅನುಭವಿಸುವ, ಇಲ್ಲವೆ ನೊಂದುಕೊಳ್ಳುವ ಸ್ವಭಾವವನ್ನು ಹೆಚ್ಚಾಗಿ ಮೈಗೂಡಿಸಿಕೊಂಡಿದ್ದು ಸದಾ ಮನುಷ್ಯ ದು:ಖಿಯಾಗಿರುತ್ತಾನೆ. ಮುಂದೇನಾಗುವದೋ ಎಂಬ ಆತಂಕ ವಿದ್ಯಾರ್ಥಿಗಳಿಂದ ಹಿಡಿದು ಎಲ್ಲರನ್ನು ಬಾಧಿಸುತ್ತಿದೆ. ಸಾಮಾಜಿಕ, ರಾಜಕೀಯ, ಕ್ರೀಡಾ, ಶೈಕ್ಷಣಿಕ, ಸಾಂಸ್ಕೃತಿಕ, ವೈಜ್ಞಾನಿಕ, ತಾಂತ್ರಿಕ, ವೈದ್ಯಕೀಯ, ಹೀಗೆ ನಾನಾ ರಂಗಗಳಲ್ಲಿ ದಾಪುಗಾಲನ್ನಿಟ್ಟು ಪ್ರಗತಿಯತ್ತ ನಾಗಾಲೋಟದಲ್ಲಿ ಸಾಗುತ್ತಿರುವ ಮನುಷ್ಯ ಸದಾ ಪೈಪೋಟಿ, ಸಂಘರ್ಷ, ಒತ್ತಡಗಳಿಗೆ

ಒಳಗಾಗಿ ಅತಿ ಚಿಕ್ಕ ವಯಸ್ಸಿನಲ್ಲಿಯೇ ನಾನಾ ಖಾಯಿಲೆಗಳಿಗೆ ಬಲಿಯಾಗುತ್ತಿದ್ದಾನೆ. ಹಾಗಾಗಿ ಅರಿಸ್ಟಾಟಲ್ ಹೇಳಿರುವ ಸುಖಕರ ಜೀವನವೇ ನೆಮ್ಮದಿಯುತವೂ ಆದ ಜೀವನವೇ ರಾಜ್ಯದ ಹಾಗೂ ಮಾನವನ ಉದ್ದೇಶ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕಾಗಿದೆ. ಅವರ ಅನೇಕ ರಾಜಕೀಯ ಚಿಂತನೆಗಳು ಸಮಕಾಲೀನ ಪ್ರಪಂಚದಲ್ಲಿ ಪ್ರಸ್ತುತವೆನಿಸಿವೆ.

**ಉಪಸಂಹಾರ:** ರಾಜ್ಯ ಸಮಾಜ ಸ್ವಾಭಾವಿಕವಾಗಿ ಬೆಳೆದು ಬಂದಿರುವ ಸಂಸ್ಥೆಯಾಗಿದ್ದು ಮನುಷ್ಯನ ಬಯಕೆಗಳನ್ನು ಈಡೇರಿಸಿಕೊಳ್ಳಲು ಸುಖಕರವಾದ ನೆಮ್ಮದಿಯುತವಾದ, ಉತ್ತಮ ಸುಖಕರ ಜೀವನವನ್ನು ನಡೆಸುವ ಸಲುವಾಗಿ ಅಸ್ಥಿತ್ವಕ್ಕೆ ಬಂದಿದೆ ಎಂದು ಹೇಳಿರುವ ಅರಿಸ್ಟಾಟಲ್ ರವರ ಹೇಳಿಕೆ ಇಂದಿಗೂ ಅನ್ವಯವಾಗುತ್ತದೆ ಏಕೆಂದರೆ ಮನುಷ್ಯ ತನ್ನ ಎಲ್ಲ ಬೇಡಿಕೆಗಳನ್ನು ತಾನೇ ಪೂರೈಸಿಕೊಳ್ಳಲು ಸಾಧ್ಯವಿಲ್ಲ

ಪ್ರಕೃತಿಯು ಪ್ರತಿಯೊಬ್ಬರಿಗೂ ಅಗತ್ಯವಾದಷ್ಟನ್ನು ಒದಗಿಸಿದೆ ಆದರೆ ಎಲ್ಲವೂ ತನಗೆ ಬೇಕೆಂಬ ಅತಿಯಾಸೆಗಲ್ಲ ಎಂಬ ಮಾತು ಹಾಗೂ ಆಸ್ತಿ ಸಂಪಾದನೆ ನಿರ್ವಹಣೆಯನ್ನು ಮನೆಯ ಕುಟುಂಬದ ನಿರ್ವಹಣೆಗೆ ಹೋಲಿಸಿರುವುದು ಪ್ರಸ್ತುತ ಸನ್ನಿವೇಶಕ್ಕೂ ಸಮಂಜಸವಾಗಿದೆ

**ಪರಾಮರ್ಶನ ಗ್ರಂಥಗಳು**


1. Benjamin Jowett, Aristotle:Politics- 2017, Kindle Publishers
2. Barnes, Jonathan, Aristotle : A Very Short Introduction, Oxford University Press 2000, ISBN: ISBN number:9780192854087, ISBN number:9780191540356
3. Lenn E. Goodman, and Robert B. Talisse Aristotle's Politics Today, edited, State University of New York Press, 2007
4. Peter L. Phillips Simpson A Philosophical Commentary On The Politics Of Aristotle,ISBN: 9780807853573 Publisher: The University of North Carolina Press,
5. Hutchinson, D. S.; Natali, Carlo Aristotle : His Life and School, Princeton University Press 2013, ISBN: ISBN number:9780691096537, ISBN number:9781400846009
6. Judith A. Swanson , and C. David Corbin, Aristotle's Politics : A Reader's Guide, Bloomsbury Publishing Plc, Date2009-07-21
7. H. W. Carless Aristotle's Politics 1874 Davis Benjamin Jowett
8. Aristotle W. E. Bolland Andrew Lang Aristotle's Politics: Books I, III, IV, VII , , ISBN: 9781430496960 , Publisher: Kessinger Publishing
9. Aristotle: The Politics And The Constitution Of Athens (Cambridge Texts In The History Of Political Thought) , ISBN: 9780521484008, Publisher: Cambridge University Press
10. Aristotle, Melissa Lane, et al. Aristotle's Politics: Writings from the Complete Works: Politics, Economics, Constitution of Athens, Kindle Edition, Symposium by Plato Plato | 1 January 2017,Kindle Edition
11. Mary P. Nichols, Citizens And Statesmen: A Study Of Aristotle's Politics ,
12. Citizens And Statesmen: A Study Of Aristotle's Politics, ISBN: 9780847677030, Publisher: Rowman & Littlefield Publishers
13. Edwin M. Hartman Introduction to Aristotle, virtue ethics, and this book, , New York University, Book: Virtue in Business, Published online: 05 July 2013

International Journal of Academic Research
ISSN: 2348-7666; Vol.6, Issue-1, January, 2019
Impact Factor: 6.023; Email: drtvramana@yahoo.co.in

14. H. Sidgwick Aristotle's Classification of Forms of Government, Author(s):, Source: The Classical Review, Vol. 6, No. 4 (Apr., 1892), pp. 141-144, Published by: Cambridge University Press on behalf of The Classical Association
15. Wm. A. Dunning Source: Political Science Quarterly, Vol. 22, No. 3 (Sep., 1907), pp. 545-547 Published by: The Academy of Political Science
16. E. Barker Reviewed Work(s): The Political Thought of Plato and Aristotle Review by: E. G. Elliott, Source: The American Political Science Review, Vol. 2, No. 1 (Nov., 1907), pp. 71-75
17. Chester Lloyd Jones, Source: The Annals of the American Academy of Political and Social Science, Vol. 31,American Waterways (Jan., 1908), pp. 287-288, Published by: Sage Publications, Inc. in association with the American Academy of Political and Social Science
18. ಡಾ. ಭುವನೇಶ್ವರ ಪ್ರಸಾದ್, ಪಾಶ್ಚಿಮಾತ್ಯ ಮತ್ತು ಪೌರಸ್ತ್ಯ ರಾಜಕೀಯ ಚಿಂತನೆ,೨೦೧೩, ಶಬರಿಮಲಯನ್ ಬುಕ್ ಡಿಸ್ಟ್ರಿಬ್ಯೂಟರ್ಸ್,
19. ಡಾ.ಕೆ.ಜೆ. ಸುರೇಶ್, ಪಾಶ್ಚಿಮಾತ್ಯ ಮತ್ತು ಪೌರಸ್ತ್ಯ ರಾಜಕೀಯ ಚಿಂತನೆ,
20. ಡಾ.ಜಿ.ಆರ್. ಪೂರ್ಣಿಮಾ, ಡಾ.ಎಂ.ಎನ್. ಸುರೇಶ್‌ಕುಮಾರ್, ಪಾಶ್ಚಿಮಾತ್ಯ ಮತ್ತು ಪೌರಸ್ತ್ಯ ರಾಜಕೀಯ ಚಿಂತನೆ,